ದಿನಾಂಕ: 02-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ. ಎ.ಕೆ.ಕೆ. 6ನೇ ಪ್ರತಿವಾದಿ ಪರ ವಕೀಲರಿಂದಃ</u>**

ನಾನು ಹುಟ್ಟುವುದಕ್ಕಿಂತ ಪೂರ್ವದಲ್ಲಿ ಮುಶೆಪ್ಪ ಇವರು ತೀರಿಕೊಂಡಿರುತ್ತಾರೆ. ನಾನು 1995ರಲ್ಲಿ ಜನಿಸಿರುತ್ತೇನೆ. ಮುಶೆಪ್ಪ ಇವರಿಗೆ ದಾವಾ ಆಸ್ತಿಗಳು ಅವರ ತಂದೆಯಿಂದ ಬಂದಿರುತ್ತವೆ. ಮುಶೆಪ್ಪ ಇವರಿಗೆ ಅವರ ತಂದೆಯಿಂದ ಅಸ್ತಿಗಳು ಬಂದಿರುತ್ತವೆ ಎಂದು ಹೇಳಲು ನಾನು ದಾಖಲೆಗಳನ್ನು ನೇಡಿಲ್ಲ. ಮುಶೆಪ್ಪ ಇವರ ಮರಣಾ ನಂತರ ದಾವಾ ಆಸ್ತಿಗಳ ಉತಾರಗಳಲ್ಲಿ ಪ್ರತಿವಾದಿ 1 ರಿಂದ 4 ರವರ ಹೆಸರು ದಾಖಲಾಗಿರುತ್ತವೆ ಎಂದರೆ ಸರಿ. ನನಗೆ ದಾವಾ ಆಸ್ತಿಗಳ ಸರ್ವೆ ನಂಬರ ಹೇಳಲು ಬರುವುದಿಲ್ಲ. ಅದೇ ರೀತಿ ಚಕ್ಕಬಂದಿಯು ಸಹ ಹೇಳಲು ಬರುವುದಿಲ್ಲ.

2. 1998 ರಿಂದ ದಾವಾ ಆಸ್ತಿಗಳ ಕಬ್ಜೆಯಲ್ಲಿ ನನ್ನ ಸಹೋದರರಾದ ಪ್ರತಿವಾದಿ 1 ರಿಂದ 4 ರವರು ಇರುತ್ತಾರೆ ಎಂದರೆ ಸರಿಯಲ್ಲ, ನಾವೆಲ್ಲರು ಕಬ್ಜೆಯಲ್ಲಿ ಇರುತ್ತೇವೆ. ನನ್ನ ಗಂಡನ ಊರು ಕಡಬಿ, ನಾನು ನನ್ನ ತವರೂರಾದ ಬೆಣಚಿನಮರಡಿಗೆ ಹೋಗಿ-ಬಂದು ಮಾಡುತ್ತೇನೆ. 1998ರಲ್ಲಿ ದಾವಾ ಆಸ್ತಿಗಳಿಗೆ ಪ್ರತಿವಾದಿ 1 ರಿಂದ 4 ರವರ ಹೆಸರು ದಾಖಲಾಗಿರುವುದು ಸರಿ ಅಲ್ಲ ಎಂದು ಪ್ರಶ್ನಿಸಿ ನಾನು ಯಾವುದೇ ಅಪೀಲು ಸಲ್ಲಿಸಿಲ್ಲ. 1998 ರಿಂದ ಈ ದಾವೆ ಹೂಡುವವರೆಗು ನಮ್ಮ ಮತ್ತು ಪ್ರತಿವಾದಿ 1 ರಿಂದ 4 ರವರ ನಡುವಿನ ಸಂಬಂಧ ಸರಿ ಇತ್ತು, ನಂತರ ಸರಿ ಇರಲಿಲ್ಲ.

3. ಈ ದಾವೆ ಹಾಕುವುದಕ್ಕಿಂತ 10 ದಿನಗಳ ಮುಂಚೆ ದಾವಾ ಆಸ್ತಿಗಳ ಉತಾರದಲ್ಲಿ ಪ್ರತಿವಾದಿಯರ ಹೆಸರು ದಾಖಲಾಗಿರುವುದು ನಮಗೆ ಗೊತ್ತಾಗಿರುತ್ತದೆ. ದಾವಾ ಆಸ್ತಿಗಳ ತೆರಿಗೆಯನ್ನು ಪ್ರತಿವಾದಿ 1 ರಿಂದ 4 ರವರು ಕೊಡುತ್ತಾರೆ ಎಂದರೆ ಸಾಕ್ಷಿದಾರರು ತಾವೆಲ್ಲರೂ ಸೇರಿಸಿ ಕೊಡುವುದಾಗಿ ಹೇಳುತ್ತಾರೆ. ನಾನು ದಾವಾ ಆಸ್ತಿಗಳ ತೆರಿಗೆ ಪಾವತಿ ಮಾಡಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ.

4. ದಾವಾ ಆಸ್ತಿಗಳ ಮೇಲೆ ಪ್ರತಿವಾದಿ 1 ರಿಂದ 4 ಸಾಕಷ್ಟು ಸಾಲ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 1 ರಿಂದ 4 ರವರಿಗೆ ದಾವಾ ಆಸ್ತಿಗಳ ಮೇಲೆ ಸಾಲ ತೆಗೆದುಕೊಳ್ಳುವಾಗ ನಾವು ಯಾವುದೇ ತಕರಾರು ಮಾಡಿಲ್ಲ. ಪ್ರತಿವಾದಿ 1 ರಿಂದ 4 ರವರಿಗೆ ದಾವಾ ಆಸ್ತಿಗಳಿಗೆ ತಮ್ಮ ಹೆಸರು ಹಚ್ಚಿಕೊಳ್ಳಲು ನಾನು ಮತ್ತು ನನ್ನ ತಾಯಿ ಒಪ್ಪಿಗೆ ಕೊಟ್ಟಿದ್ದೆವು ಎಂದರೆ ಸರಿಯಲ್ಲ.

5. ನನ್ನ ಮದುವೆ 2010ರಲ್ಲಿ ಆಗಿರುತ್ತದೆ. ಮದುವೆ ಆದಾಗಿನಿಂದ ನಾನು ನನ್ನ ಗಂಡನ ಮನೆಯಲ್ಲಿ ವಾಸ ಇದ್ದೇನ ಎಂದರೆ ಸರಿ. ಪ್ರತಿವಾದಿಗಳು 12 ವರ್ಷಗಳಿಂದ ಮೇಲ್ಪಟ್ಟು ದಾವಾ ಆಸ್ತಿಗಳ ಕಬ್ಜೆಯಲ್ಲಿ ಇರುವುದು ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಕಬ್ಬು ಮತ್ತು ಗೋವಿನ ಜೋಳ ಬೆಳೆಯುತ್ತಾರೆ. ದಾವಾ ಆಸ್ತಿಗಳಲ್ಲಿ  ಕಬ್ಬು ಮತ್ತು ಗೋವಿನ ಜೋಳ ಬೆಳೆಯುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸುತ್ತೇನೆ.

ಓ.ಎಸ್. ನಂಃ 752/2022
ಪಿ.ಡಬ್ಲ್ಯೂ-1 (ಸಿದ್ದವ್ವ)

ದಾವಾ ಆಸ್ತಿಗಳು ಒಣಬೇಸಾಯದ ಜಮೀನುಗಳು ಮತ್ತು ಅಲ್ಲಿ ಉರುಳ್ಳಿ ಮತ್ತು ಸಜ್ಜೆ ಬೆಳೆಯುತ್ತಾರೆ ಎಂದರೆ ಸರಿಯಲ್ಲ. ಮಳೆ ಬಂದಾಗ ಮಾತ್ರ ದಾವಾ ಆಸ್ತಿಗಳಲ್ಲಿ ಬೆಳೆ ಬೆಳೆಯುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಸರಿಯಾಗಿ ಬೆಳೆ ಬೆಳೆಯುತ್ತಿರದೇ ಇದ್ದುದ್ದರಿಂದ ನನ್ನ ಅಣ್ಣ ತಮ್ಮಂದಿಯರಿಗೆ ಬಹಳಷ್ಟು ಮನೆತನದ ಅಡಚಣೆ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯರು ಸಾಕಷ್ಟು ಸಾಲ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ